# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 19.10.2011**

## *ದೀಪಾವಳಿ ಹಬ್ಬದ ಪ್ರಯುಕ್ತ ಪಾಲಿಕೆಯಿಂದ ಪೂರ್ವಭಾವಿ ಸಿದ್ಧತೆ*

ರಾಜ್ಯಾದ್ಯಂತ ಸಡಗರ ಸಂಭ್ರಮಗಳಿಂದ ಆಚರಿಸಲಿರುವ ದೀಪಾವಳಿ ಹಬ್ಬವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ಸಡಗರ ಸಂಭ್ರಮದ ಜೊತೆಗೆ ಪರಿಸರ ಸ್ನೇಹಿಯಾಗಿ, ಮಾಲಿನ್ಯ ನಿಯಂತ್ರಿಸುವ ಜೊತೆಗೆ ಅರ್ಥಪೂರ್ಣವಾದ ಸರಳ ರೀತಿಯಲ್ಲಿ ಆಚರಿಸಬೇಕೆಂದು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿ, ದೀಪಾವಳಿ ಸಂದರ್ಭದಲ್ಲಿ ಈ ಕೆಳಕಂಡ ಕ್ರಮಗಳನ್ನು ಅನುಸರಿಸಲು ಕೋರಿರುತ್ತಾರೆ.

1. ಹಬ್ಬದ ದಿನದಂದು ಪೂಜೆಗಾಗಿ ಮತ್ತು ಇತರೆ ಕಾರ್ಯಗಳಿಗೆ ಬಳಸಿರುವ ಹೂವು, ಹಾರ, ಬಾಳೆದಿಂಡು, ಮಾವಿನ ಸೊಪ್ಪು ಪಟಾಕಿಯ ತ್ಯಾಜ್ಯ, ಪ್ಯಾಕಿಂಗ್ ಬಾಕ್ಸ್ ಇತ್ಯಾದಿ ವಸ್ತುಗಳನ್ನು ಪಾಲಿಕೆಯ ತಳ್ಳುವ ಗಾಡಿಗಳಿಗೆ ನೀಡುವುದು ಅಥವಾ ಕಸ ಸಂಗ್ರಹಣಾ ಕಂಟೈನರ್‌ಗಳಲ್ಲಿ ಹಾಕುವುದರ ಮೂಲಕ ಶುಚಿತ್ವವನ್ನು ಕಾಪಾಡಬೇಕು.
2. ಸಾರ್ವಜನಿಕರು ಹಾನಿಕಾರಕ ಹಾಗೂ ಪರಿಸರ ಮಾಲಿನ್ಯ ಉಂಟು ಮಾಡುವಂತಹ ಪಟಾಕಿಗಳನ್ನು ಸಿಡಿಸಬಾರದು.
3. ಚಿಕ್ಕಮಕ್ಕಳು ಪಟಾಕಿಗಳನ್ನು ಸಿಡಿಸದಂತೆ ಪಾಲಕರು ಎಚ್ಚರ ವಹಿಸಬೇಕು.
4. ನಗರದ ಪರಿಸರ ಮಾಲಿನ್ಯ ಆಗದಂತೆ ತಡೆಗಟ್ಟಲು ಸಾರ್ವಜನಿಕರು ಪಾಲಿಕೆಯೊಂದಿಗೆ ಸಹಕರಿಸಲು ಕೋರಿದೆ.
5. ದೂರುಗಳಿಗೆ ನಿಯಂತ್ರಣ ಕೊಠಡಿ ದೂರವಾಣಿ ಸಂಪರ್ಕಿಸಿ: 22660000 / 22221188, 22975595.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 19.10.2011**

ದಿನಾಂಕ: 20.10.2011 ರಂದು **"ನಮ್ಮ ಮೆಟ್ರೋ ರೈಲು"** ಉದ್ಘಾಟನಾ ಸಮಾರಂಭದ ಸಂಬಂಧವಾಗಿ ಪೂರ್ವ ವಲಯದಲ್ಲಿ ಮಹಾತ್ಮಗಾಂಧಿ ರಸ್ತೆಯಿಂದ ಬೈಯಪ್ಪನಹಳ್ಳಿಯವರೆಗಿನ ಆಸುಪಾಸಿನ ರಸ್ತೆಗಳಲ್ಲಿ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಜಂಟಿ ಆಯುಕ್ತರು (ಪೂರ್ವ) ವಲಯ ರವರ ನೇತೃತ್ವದಲ್ಲಿ 9 ತಂಡಗಳನ್ನು ರಚಿಸಿ, ಪ್ರತಿಯೊಬ್ಬ ಕಾರ್ಯಪಾಲಕ ಅಭಿಯಂತರರಿಗೆ ಕಾರ್ಯವನ್ನು ವಹಿಸಿಕೊಟ್ಟು ಅಭಿವೃದ್ಧಿಪಡಿಸಲಾಗಿದೆ ಎಂದು ಪೂಜ್ಯ ಮಹಾಪೌರರು ತಿಳಿಸಿದ್ದಾರೆ.

1. ಪಾದಚಾರಿ ಮಾರ್ಗಗಳನ್ನು ಸ್ವಚ್ಛಗೊಳಿಸುವುದು, ಪಾದಚಾರಿ ಮಾರ್ಗದಲ್ಲಿ ಸಮತಟ್ಟವಲ್ಲದ ಕಲ್ಲುಗಳನ್ನು ಹಾಗೂ ಕಾಬ್ಲರ್ ಕಲ್ಲುಗಳನ್ನು ಸರಿಪಡಿಸುವುದು.
2. ಮರಗಳಿಗೆ ಪಾತಿ ಮಾಡುವುದು ಹಾಗೂ ಪಾತಿ ಸುತ್ತಲಿನ ಕಲ್ಲುಗಳಿಗೆ ಹಸಿರು ಮತ್ತು ಬಿಳಿ ಬಣ್ಣ ಬಳಿಯುವುದು.
3. ಪಾದಚಾರಿ ಮಾರ್ಗದ ಕರ್ಬ್ ಕಲ್ಲುಗಳನ್ನು ಮತ್ತು ರಸ್ತೆ ಮಧ್ಯಂತರಗಳನ್ನು (ಮೀಡಿಯನ್) ಸ್ವಚ್ಛಗೊಳಿಸಿ ಕಪ್ಪು ಮತ್ತು ಬಿಳಿ ಬಣ್ಣ ಬಳಿಯುವುದು.
4. ರಸ್ತೆ ಗುಂಡಿಗಳು ಹಾಗೂ ರಸ್ತೆ ಕತ್ತರಿಸಿರುವ ಭಾಗಗಳನ್ನು ಡಾಂಬರೀಕರಣದಿಂದ ಮುಚ್ಚುವುದು.
5. ಹೊಸದಾಗಿ ರಸ್ತೆ ಪಕ್ಕಗಳಲ್ಲಿ ಗಿಡ ನೆಡಲು ಗುಂಡಿ ತೆಗೆಸಿ ಕ್ರಮವಹಿಸುವುದು.
6. ಅಲಂಕಾರಿಕ ಗಿಡಗಳನ್ನು ನೆಡುವುದು ರಸ್ತೆ ಪಕ್ಕದಲ್ಲಿ ಮತ್ತು ರಸ್ತೆ ಮಧ್ಯಂತರ (ಮೀಡಿಯನ್)ಗಳಲ್ಲಿ ಗಿಡ ನೆಡುವುದು ಗ್ರೀಲ್‌ಗಳಿಗೆ ಬಣ್ಣ ಬಳಿಯುವುದು.
7. ಭೂಗತ ಕೇಬಲ್ ಅಳವಡಿಸುವುದು, ಎ.ಬಿ.ಸಿ. ಕೇಬಲ್ ಅಳವಡಿಸುವುದು, ಕೆಲವು ಸ್ಥಳಗಳಲ್ಲಿ ಸೋಡಿಯಂ ದೀಪಗಳನ್ನು ಅಳವಡಿಸುವುದು, ಹಾಳಾಗಿರುವ ಪ್ಯಾನಲ್ ಬೋರ್ಡ್ ಅಳವಡಿಸುವುದು.

ಈ ಮೇಲ್ಕಂಡ ಕಾರ್ಯಗಳಿಗೆ ಪೂರ್ವ ವಲಯದಲ್ಲಿ ಒಟ್ಟು 46.00 ಕಿ.ಮೀ. ಉದ್ದದ ರಸ್ತೆಯನ್ನು ಸೌಂದರೀಕರಣಗೊಳಿಸಿದ್ದು, ಇದರ ಅಂದಾಜು ಮೊತ್ತ ಸುಮಾರು ರೂ.200.00 ಲಕ್ಷಗಳಾಗಿರುತ್ತದೆ ಎಂದು ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಹಾಗೂ ಪೂರ್ವ ವಲಯದ ಅಧಿಕಾರಿಗಳು ಕಳೆದ ಎರಡು ವಾರಗಳಿಂದ ಶ್ರಮಪಟ್ಟು ಕೆಲಸ ಮಾಡಿದ್ದಾರೆ. ಕಡಿಮೆ ಅವಧಿಯಲ್ಲಿ ರಸ್ತೆಗಳನ್ನು ಇಷ್ಟೊಂದು ಸುಂದರವಾಗಿ ಕಾಣುವಂತೆ ಮಾಡಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಮುಂದೆಯೂ ಕೂಡಾ ಈ ಸ್ಥಳಗಳಲ್ಲಿ ಸ್ವಚ್ಛತೆ ಮತ್ತು ಅಭಿವೃದ್ಧಿ ಕಾಪಾಡಿಕೊಂಡು ಬರಲಾಗುವುದೆಂದು ಅವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**